## ದಿನಾಂಕ:29-05-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು

## ವಿಷಯದ ಸಂಖ್ಯೆ:21/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಾಪೂಜಿನಗರ, ಮಾರುತಿನಗರ ಮತ್ತು ಕವಿಕಾ ಬಡಾವಣೆಯಲ್ಲಿ ವೃಷಭಾವತಿ ಕಣಿವೆಯ ವಿ–100 ನ ಚೈನೇಜ್–8000 ಮೀ ಬಲಗಡೆ ಆರ್.ಸಿ.ಸಿ ಪ್ರೀಕಾಸ್ಟ್ ಸೆಗ್ಮೆಂಟ್ ತಡೆಗೋಡೆ ನಿರ್ಮಿಸುವ ಕಾಮಗಾರಿಯ ಅಂದಾಜು ಮೊತ್ತವಾದ ರೂ.280.00 ಲಕ್ಷಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಯಾಗಿದ್ದು, ಕಾಮಗಾರಿಗೆ ಮುಖ್ಯ ಅಭಿಯಂತರರು (ಬೃಹತ್ ನೀರುಗಾಲುವೆ–ದಕ್ಷಿಣ) ರವರು ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಇಬ್ಬರು ಗುತ್ತಿಗೆದಾರರು ತಾಂತ್ರಿಕ ಬಿಡ್‌ನಲ್ಲಿ ಅರ್ಹರಾಗಿದ್ದು, ಈ ಪೈಕಿ ಗುತ್ತಿಗೆದಾರರಾದ ಶ್ರೀ.ಜೆ.ಸಿ.ಪ್ರಕಾಶ್ ರವರು ರೂ.3,14,40,495/– ಗಳನ್ನು ನಮೂದಿಸಿ ಕನಿಷ್ಟ ದರ ನಮೂದಿಸಿರುವ ಟೆಂಡರ್‌ದಾರರಾಗಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.2,79,41,140.50 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಜೆ.ಸಿ.ಪ್ರಕಾಶ್ ರವರು ಶೇ.12.42% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿರುತ್ತಾರೆ. ಸದರಿ ದರಗಳನ್ನು ಮಂಜೂರಾದ ಅಂದಾಜು ಪಟ್ಟಿಗೆ ಹೋಲಿಸಿದಾಗ ಶೇ.12.42% ರಷ್ಟು ಹೆಚ್ಚುವರಿಯಾಗಿರುತ್ತದೆ. ತದರನ್ವಯ, ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ತಾವು ನಮೂದಿಸಿರುವ ದರಗಳು ಸೂಕ್ತವಾಗಿದ್ದು, ಪ್ರತಿನಿತ್ಯ ಹರಿಯುವ ನೀರಿನಲ್ಲಿ ಕೆಲಸ ಮಾಡಬೇಕಾಗಿರುವುದರಿಂದ ಕಡಿಮೆ ದರದಲ್ಲಿ ಕಾಮಗಾರಿ ನಿರ್ವಹಿಸಲು ಕಷ್ಟವೆಂದು ತಿಳಿಯಪಡಿಸಿ ಪತ್ರ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) ರೂ.3,14,10,495/– ಗಳಾಗಿದ್ದು, ಟೆಂಡರ್ ದರವು ಶೇ.12.42 ರಷ್ಟು ಹೆಚ್ಚಿಗೆ ಇರುವುದರಿಂದ ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/335/ಎಮ್‌ಎನ್‌ಯು/2007(ಭಾ) ದಿನಾಂಕ:08/05/2009 ಹಾಗೂ 11/05/2009 ರ ಮೇರೆಗೆ ಟೆಂಡರ್ ಅನುಮೋದಿಸುವ ಅಧಿಕಾರವು ಪಾಲಿಕೆ ಸಭೆಯ ವ್ಯಾಪ್ತಿಗೆ ಬರುತ್ತದೆ.

ಈ ಮೇರೆಗೆ, ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಿರುವ ಕನಿಷ್ಟ ಗುತ್ತಿಗೆದಾರರಾದ ಶ್ರೀ.ಜೆ.ಸಿ.ಪ್ರಕಾಶ್ ರವರ ಟೆಂಡರ್ ಮೊತ್ತ ರೂ.3,14,10,495/- ಗಳ (2009-10 ಸಾಲಿನ ದರ ಪಟ್ಟಿಯ ಮೇಲೆ ಶೇ.12.42% ಹೆಚ್ಚಿಗೆ) ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-05-2010ರ ಟಿಪ್ಪಣಿ.

ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಸತ್ಯನಾರಾಯಣರವರು ಕೆಳಕಂಡ ನಿರ್ಣಯವನ್ನು ಮಂಡಿಸಿದರು

ನಿರ್ಣಯ:- ದಿನಾಂಕ: 06-05-2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದು.

ಶ್ರೀ ಬಿ.ಎಸ್. ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಶ್ರೀ ಪಿ.ಎನ್. ಸದಾಶಿವರವರು ಅನುಮೋದಿಸಿದರು

ಮಹಾಪೌರರು ನಿರ್ಣಯವನ್ನು ಮತಕ್ಕೆ ಹಾಕಲಾಗಿ ಸಭೆಯು ಬಹುಮತದಿಂದ ಒಪ್ಪಿದೆ ಎಂದು ತೀರ್ಮಾನಿಸಿತು.

ನಿರ್ಣಯ:- ದಿನಾಂಕ: 06-05-2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

ಎಸ್.ಕೆ.ನಟರಾಜ

(ಎಸ್. ಕೆ. ನಟರಾಜ)
ಮಹಾಪೌರರು